**ದಿನಾಂಕ: 23.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ. ಎನ್ ಎಂ ಎಸ್ ವಕೀಲರಿಂದ

ನಾನು 8 ನೇ ತರವತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯರು ದಾವಾ ಸ್ವತ್ತುಗಳಲ್ಲಿ ಪಾಲು ಕೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರ ವನ್ನು ತಯಾರಿಸಲು ಮಾಹಿತಿಯನ್ನು ನಾನೇ ಒದಿಗಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ವಾದಿ ಹಾಗೂ 1 ರಿಂದ 16 ನೇ ಪ್ರತಿವಾದಿಯರ ಮೂಲ ಪುರುಷ ಗದಿಗೆಪ್ಪ ರವರಾಗಿರುತ್ತಾರೆ ಅವರ ತಂದೆಯ ಹೆಸರು ಸಂಕಪ್ಪ ಎಂದು ಇರುತ್ತದೆ. ಸದರಿ ಗದಿಗೆಪ್ಪ ರವರಿಗೆ 8 ಜನ ಮಕ್ಕಳು ಅವರೆಂದರೆ 1) ಮಲ್ಲಪ್ಪ 2) ಶಿವಲಿಂಗಪ್ಪ 3) ಶಂಕ್ರೆಪ್ಪ 4) ಶೆಖಪ್ಪ 5) ಸಿದ್ದವ್ವ 6) ಬಸವಣ್ಣವ್ವ 7) ಪಾರವ್ವ ಮತ್ತು 8) ಸಂಕಪ್ಪ. ಸದರಿಯವರ

ಪೈಕಿ 8 ನೇಯವನಾದ ಸಂಕಪ್ಪ ರವರು ಗೌರವ್ವ ಎಂಬುವವರಿಗೆ ದತ್ತು ಮಗನಾಗಿ ಹೋಗಿರುತ್ತಾನೆ ಎಂದರೆ ಸರಿ.

2. ಗದಿಗೆಪ್ಪ ರವರ ಮಗ ಮಲ್ಲಪ್ಪ 40 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ಮಲ್ಲಪ್ಪ ರವರಿಗೆ 4 ಜನ ಮಕ್ಕಳು ಅವರೆಂದರೆ 1) ಚಂದ್ರಪ್ಪ 2 ) ಶಾಂತವ್ವ 3) ಕಾಂತೆವ್ವ ಮತ್ತು 4) ಗೌರವ್ವ. ಸದರಿ ಮಲ್ಲಪ್ಪ ರವರ ಹೆಂಡತಿಯ ಹೆಸರು ಮಲ್ಲಮ್ಮ. ಸದರಿ ಮಲ್ಲಮ್ಮ ತೀರಿಕೊಂಡಿರುತ್ತಾರೆ.

3. ಗದಿಗೆಪ್ಪ ರವರ ಇನ್ನೊರ್ವ ಮಗ ಶಿವಲಿಂಗಪ್ಪ 40 ವಶಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ಶಿವಲಿಂಗಪ್ಪ ರವರಿಗೆ ಮಲ್ಲಮ್ಮ ಎಂಬ ಹೆಂಡತಿ ಇದ್ದರು ಎಂದರೆ ಸರಿ. ಸದರಿ ಶಿವಲಿಂಗಪ್ಪ ರವರಿಗೆ 6 ಜನ ಮಕ್ಕಳು ಅವರೆಂದರೆ 1) ಶಿವಯೋಗೆಪ್ಪ 2) ಚನ್ನಬಸಪ್ಪ 3) ಸುಭಾಸ 4) ಪಂಚಪ್ಪ 5) ಸುನಂದಾ ಮತ್ತು 6) ರತ್ನವ್ವ. ಸದರಿ ಶಿವಲಿಂಗಪ್ಪ ರವರಿಗೆ ಮುರಿಗೆಪ್ಪ ಎಂಬ ಮಗ ಸಹ ಇದ್ದ. ಸದರಿ ಮುರಿಗೆಪ್ಪ ಬಸಪ್ಪ ದ್ಯಾಮಣ್ಣ ಬೆಂಕಣ್ಣನವರ ರವರಿಗೆ ದತ್ತು ಹೋಗಿರುತ್ತಾನೆ ಎಂದರೆ ಸರಿ. ಸದರಿ ಶಿವಯೋಗೆಪ್ಪ 2012 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಸದರಿ ಶಿವಯೋಗಪ್ಪ ರವರಿಗೆ 3 ಜನ ಮಕ್ಕಳ್ಳು ಅವರೆಂದರೆ 1) ಮಾಲತೇಶ 2) ಗದಿಗೆಪ್ಪ ಮತ್ತು 3) ನಿವೇದಿತಾ. ಸದರಿ ಶಿವಯೋಗಪ್ಪ ರವರಿಗೆ ಸದರಿ 3 ಜನ ಮಕ್ಕಳು ಬಿಟ್ಟು ಬೇರೆ ಯಾರು ಮಕ್ಕಳು ಇರಲಿಲ್ಲ. ಸದರಿ ಶಿವಯೋಗಪ್ಪ ರವರಿಗೆ ಮುರಿಗೆಪ್ಪ ಮಗ ಜನಿಸಿದ್ದ ಎಂದರೆ ಸರಿಯಲ್ಲ. ಸದರಿ ಆತ ನನ್ನ ತಂದೆಗೆ ಜನಿಸಿದ್ದರು ಸಹ ಜನಿಸಿರಲಿಲ್ಲ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ಮೂಲ ಪುರಷ ಗದಿಗೆಪ್ಪರವರಿಗೆ ಮಹಾಲಿಂಗಪ್ಪ ಎಂಬ ಮಗ ಇದ್ದು ಆತ ಮಹದೇವಕ್ಕ ಎಂಬುವವರನ್ನು ಮದುವೆ ಆಗಿದ್ದರು ಎಂದರೆ ಸರಿ. ಸದರಿಯವರಿಗೆ 4 ಜನ ಮಕ್ಕಳು ಅವರೆಂದರೆ 1) ವೀರಪ್ಪ 2) ಅನುಸೂಯಾ 3) ಶಂಕ್ರಮ್ಮ ಮತ್ತು4) ಕಸ್ತೂರಿ.

5. ಮೂಲ ಪುರುಷ ಗದಿಗೆಪ್ಪ ರವರಿಗೆ ಶೇಖಪ್ಪ ಎಂಬ ಮಗ ಇದ್ದು ಆತ ವೀರಮ್ಮ ರವರನ್ನು ಮದುವೆ ಆಗಿದ್ದರು ಎಂದರೆ ಸರಿ. ಸದರಿಯವರಿಗೆ ಯಾವುದೇ ಮಕ್ಕಳು ಇರಲಿಲ್ಲ. ಸದರಿ ಗದಿಗೆಪ್ಪ ರವರ 8 ಜನ ಮಕ್ಕಳು ಹಾಗೂ ಅವರ ಪೋತಿ ವಾರಸುದಾರರು ಗದಿಗೆಪ್ಪ ರವರಿಗೆ ಸರಳ ಹಾಗೂ ಸಮೀಪದ ವಾರಸುದಾರರು ಎಂದರೆ ಸರಿ. ಸದರಿಯರನ್ನು ಹೊರತು ಪಡಿಸಿ ಮೂಲ ಪುರುಷ ಗದಿಗೆಪ್ಪ ರವರಿಗೆ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳ ಮೂಲ ಪುರಪಃ ಗದಿಗಪ್ಪ ನವರ ಹೆಸರಿನಲ್ಲಿದ್ದವು.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್